ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ. ಯವರ ನ್ಯಾಯಾಲಯ, ಚಾಮರಾಜನಗರ .

ಸಿಸಿ. 1084/2019

| | | |
|---|---|---|
| ಸಾಕ್ಷಿದಾರರು ಹೆಸರು | : ಸಿದ್ದೇಶಶೆಟ್ಟಿ | ದಿನಾಂಕಃ **17.06.2026** |
| ತಂದೆಯ ಹೆಸರು | : ಚಿಕ್ಕಣ್ಣಶೆಟ್ಟಿ | ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ |
| ವಯಸ್ಸು | : 35 ವರ್ಷ | ಬೋಧಿಸಲಾಯಿತು. |
| ಉದ್ಯೋಗ | : ಕೂಲಿ | **CW-1** |
| ವಾಸಸ್ಥಳ | : ವಡ್ಡರಹಳ್ಳಿ ಗ್ರಾಮ. | **PW-1** |

ಮುಖ್ಯ ವಿಚಾರಣೆ : ಮಾನ್ಯ ಎಪಿಪಿರವರಿಂದಃ

ಮೃತ ಬಸವಣ್ಣ ನನ್ನ ತಮ್ಮ. ಮೃತ ಅಬ್ದುಲ್ ರಹೀಮ್ ನನಗೆ ಪರಿಚಯ. ಸುಮಾರು 7–8 ವರ್ಷಗಳ ಹಿಂದೆ ನಾನು ಮನೆಯಲ್ಲಿದ್ದಾಗ ಸುಮಾರು ಮಧ್ಯಾಹ್ನ 3.30 ಗಂಟೆಗೆ ಚಾಸಾ–2 ಮತ್ತು 3 ರವರು ನಮ್ಮ ಮನೆಗೆ ಬಂದು ಮೂಡಲ ಹೊಸಹಳ್ಳಿ ರಸ್ತೆಯಲ್ಲಿ ನನ್ನ ತಮ್ಮನ ಮೋಟಾರ್ ಬೈಕ್ ಗೆ ಅಪಘಾತವಾಗಿದೆ ಎಂದು ತಿಳಿಸಿರುತ್ತಾರೆ. ನಂತರ ನಾನು, ನನ್ನ ತಂದೆ, ಚಾಸಾ–2 ರಿಂದ 4 ರವರು ಅಪಘಾತ ಸ್ಥಳಕ್ಕೆ ಹೋಗಿರುತ್ತೇವೆ. ಸ್ಥಳದಲ್ಲಿ ಆರೋಪಿ, ನನ್ನ ತಮ್ಮ ಬಸವಣ್ಣ ಮತ್ತು ರಹೀಮ್ ಅಲ್ಲಿಯೇ ಇದ್ದರು. ನನ್ನ ತಮ್ಮ ಬಸವಣ್ಣನ ತಲೆಗೆ, ಕಣ್ಣಿನ ಮೇಲೆ ಮತ್ತು ಕಾಲಿನ ಹೆಬ್ಬೆರಳಿಗೆ ಗಾಯಗಳಾಗಿದ್ದವು. ರಹೀಮ್ ಮತ್ತು ಆರೋಪಿ ಶಿವಪ್ಪರವರಿಗೂ ಸಹ ಗಾಯಗಳಾಗಿದ್ದವು. ನಾನು ನನ್ನ ತಮ್ಮನಿಗೆ ಅಪಘಾತದ ಕುರಿತು ವಿಚಾರಿಸಿದಾಗ ವಡ್ಡರಹಳ್ಳಿಯಿಂದ ತಾನು ಅರಕಲವಾಡಿಗೆ ಹೋಗುತ್ತಿರುವಾಗ ಆರೋಪಿಯು ಯಮಹ ಬೈಕ್ ನಲ್ಲಿ ಎದುರುಗಡೆಯಿಂದ ಅತೀ ವೇಗವಾಗಿ ಬಂದು ಡಿಕ್ಕಿಪಡಿಸಿದ್ದರಿಂದ ಅಪಘಾತವಾಗಿರುತ್ತದೆ ಎಂದು ತಿಳಿಸಿರುತ್ತಾರೆ. ನಮ್ಮ ಮೋಟಾರ್ ಬೈಕ್ ಡಿಸ್ಕವರಿ ಮತ್ತು ಆರೋಪಿಯ ಯಮಹ ಬೈಕ್ ಸ್ಥಳದಲ್ಲಿ ಜಖಂಗೊಂಡು ಬಿದ್ದಿದ್ದವು. ಮೂರು ಜನ ಗಾಯಾಳುಗಳನ್ನು ಅರಕಲವಾಡಿ ಗ್ರಾಮದ ಸರ್ಕಾರಿ ಆಸ್ಪತ್ರೆಗೆ ದಾಖಲು ಮಾಡಿದ್ದು, ಅಲ್ಲಿಂದ ಆಂಬುಲೆನ್ಸ್ ಮೂಲಕ ಚಾಮರಾಜನಗರ ಜಿಲ್ಲಾ ಆಸ್ಪತ್ರೆಗೆ ದಾಖಲು ಮಾಡಲಾಗಿರುತ್ತದೆ.

ಎರಡು ದಿನದ ನಂತರ ಚಿಕಿತ್ಸೆಗೆ ಸ್ಪಂದಿಸದೇ ನನ್ನ ತಮ್ಮ ಬಸವಣ್ಣ ಚಾಮರಾಜನಗರ ಜಿಲ್ಲಾ ಆಸ್ಪತ್ರೆಯಲ್ಲಿ ಮೃತನಾಗಿರುತ್ತಾನೆ. ನಂತರ ನಾನು ಠಾಣೆಗೆ ಹೋಗಿ ದೂರು ನೀಡಿರುತ್ತೇನೆ. ಸಾಕ್ಷಿ ಹೇಳಿಕೆಯಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಹೇಳಿಕೆಯನ್ನು ನಿಪಿ–1 ಎಂದೂ, ಸಾಕ್ಷಿಯ ಸಹಿಯನ್ನು ನಿಪಿ–1(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಕೃತ್ಯ ಸ್ಥಳ ಮತ್ತು ಎರಡು ವಾಹನಗಳ

ಛಾಯಚಿತ್ರಗಳನ್ನು ನೋಡಿ ಗುರುತಿಸಿದ್ದು, ಸದರಿ ಛಾಯಾಚಿತ್ರಗಳನ್ನು ನಿಪಿ–2 ಮತ್ತು 3 ಎಂದು ಗುರುತಿಸಲಾಯಿತು.

**ಪಾಟೀಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಂ.ಎಸ್ ರವರಿಂದಃ (ಎಲ್.ಎ.ಡಿ.ಎಸ್)**

ನಾನು 8ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಿಪಿ–1 ರಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ಹೇಳಿದ್ದರಿಂದ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಘಟನಾ ಸ್ಥಳಕ್ಕೆ ಹೋದಾಗ ಮಧ್ಯಾಹ್ನ 3.30 ರಿಂದ 4.00 ಗಂಟೆ ಆಗಿರಬಹುದು. ನಮ್ಮ ಮನೆಯಿಂದ ಘಟನಾ ಸ್ಥಳವು ಅರ್ಧ ಕಿಲೋಮೀಟರ್ ದೂರ ಇದೆ. ನಾನು ಮತ್ತು ನನ್ನ ತಮ್ಮ ಒಟ್ಟಿಗೆ ವಾಸವಿದ್ದೆವು. ನನ್ನ ತಮ್ಮ ಬಸವಣ್ಣ ಬೆಂಗಳೂರಿನಲ್ಲಿ ಹೋಟೆಲ್ ನಲ್ಲಿ ಕೆಲಸ ಮಾಡುತ್ತಿದ್ದರು. ಎರಡು ತಿಂಗಳಿಗೊಮ್ಮೆ ಆತನು ಊರಿಗೆ ಬಂದು ಹೋಗಿ ಮಾಡುತ್ತಿದ್ದ. ನನ್ನ ತಮ್ಮ ಬಸವಣ್ಣನಿಗೆ ಕುಡಿಯುವ ಅಭ್ಯಾಸ ಇತ್ತು ಎಂದರೆ ಸರಿಯಲ್ಲ. ಆ ದಿನ ನನ್ನ ತಮ್ಮ ಹೆಲ್ಮೆಟ್ ಧರಿಸಿರಲಿಲ್ಲ. ಮೃತ ಬಸವಣ್ಣರವರು ವಾಹನ ಚಾಲನೆಯ ಪರವಾನಿಗೆ ಹೊಂದಿರಲಿಲ್ಲ. ಅಪಘಾತ ಸ್ಥಳದಿಂದ ಸುಮಾರು 50 ಮೀಟರ್ ಅಂತರದಲ್ಲಿ ರಸ್ತೆ ತಿರುವು ಇರುತ್ತದೆ. ಹೊಸಹಳ್ಳಿ ಕಡೆಯಿಂದ ವಡ್ಡರಹಳ್ಳಿಗೆ ಹೋಗುವ ರಸ್ತೆ ಇಳಿಜಾರು ಇದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅಪಘಾತವಾದ ಸ್ಥಳದಲ್ಲಿ ಇಳಿಜಾರು ಇರಲಿಲ್ಲ ಎಂದು ನುಡಿಯುತ್ತಾರೆ. ಸದರಿ ರಸ್ತೆಯಲ್ಲಿ ವಾಹನ ನಿಬಿಡತೆ ಹೆಚ್ಚು ಎಂದರೆ ಸರಿಯಲ್ಲ. ಸದರಿ ರಸ್ತೆ ಇಳಿಜಾರು ಇದ್ದು, ರಸ್ತೆ ತಿರುವು ಇರುವುದರಿಂದ ವಾಹನಗಳ ವೇಗ ಕಡಿಮೆ ಇರುತ್ತದೆ ಎಂದರೆ ಇರಬಹುದು ಎಂದು ನುಡಿಯುತ್ತಾರೆ.

ಆ ದಿನ ಸುಮಾರು ಮಧ್ಯಾಹ್ನ 3.00 ಗಂಟೆಗೆ ಅಪಘಾತ ಆಗಿರಬಹುದು. ನನ್ನ ತಮ್ಮನನ್ನು ಆಸ್ಪತ್ರೆಗೆ ಸೇರಿಸಿದ ನಂತರ ಪೊಲೀಸರು ಆಸ್ಪತ್ರೆಯಲ್ಲಿ ಆತನ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ. ಸದರಿ ಅಪಘಾತವು ಆರೋಪಿಯ ತಪ್ಪಿನಿಂದ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಆ ದಿನ ಆರೋಪಿಯು ವಾಹನವನ್ನು ವೇಗವಾಗಿ ಚಲಾಯಿಸಿಕೊಂಡು ಬಂದಿರುತ್ತಾನೆ ಎಂದು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ರಸ್ತೆಯಲ್ಲಿ ವಾಹನವನ್ನು ವೇಗವಾಗಿ ಚಲಾಯಿಸಲು ಸಾಧ್ಯವಿರುವುದಿಲ್ಲ ಮತ್ತು ಆ ದಿನ ಆರೋಪಿ ವಾಹನವನ್ನು ವೇಗವಾಗಿ ಚಲಾಯಿಸಿರುವುದಿಲ ಎಂದರೆ ಸರಿಯಲ್ಲ. ನನ್ನ ತಮ್ಮ ಚಾಲನೆ ಪರವಾನಿಗೆ ಹೊಂದಿರದ ಕಾರಣ, ಸದರಿ ಅಪಘಾತದಲ್ಲಿ ಆರೋಪಿಯ ವಾಹನ ಜಖಂಗೊಂಡಿರುವುದನ್ನು ಉಪಯೋಗಿಸಿಕೊಂಡು ಪರಿಹಾರ ಪಡೆಯಬೇಕೆನ್ನುವ ಉದ್ದೇಶದಿಂದ ನಿಪಿ–1 ರಂತೆ ಪೂರ್ವಯೋಜಿತ ದೂರನ್ನು ನೀಡಲಾಗಿದೆ ಎಂದರೆ ಸರಿಯಲ್ಲ. ಅಪಘಾತವಾದ ತಕ್ಷಣ ದೂರು ನೀಡಲು ನನಗೆ ಯಾವುದೇ ತೊಂದರೆ ಇರಲಿಲ್ಲ. ನನ್ನ ತಮ್ಮನ ಮರಣ ನಂತರ ನಾನು ಪರಿಹಾರ ಕೋರಿ ಅರ್ಜಿ ಸಲ್ಲಿಸಿರುತ್ತೇನೆ. ಸದರಿ ಅರ್ಜಿಯಲ್ಲಿ ಪರಿಹಾರ ಪಡೆಯಬೇಕೆನ್ನುವ ಉದ್ದೇಶದಿಂದ ಸದರಿ ಅಪಘಾತ ಆರೋಪಿಯ ತಪ್ಪಿನಿಂದ ಆಗಿರುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ನನ್ನ ತಮ್ಮ ಬಸವಣ್ಣ ವಾಹನವನ್ನು ಅತೀ ವೇಗ ಮತ್ತು ಅಜಾಗರೂಕತೆಯಿಂದ ಚಲಾಯಿಸಿದ್ದು,

ಸದರಿ ವಿಚಾರ ಗೊತ್ತಿದ್ದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಅಪಘಾತ ಆರೋಪಿಯ ತಪ್ಪಿನಿಂದ ಆಗಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲಾ.

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇ ಒ.,

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಚಾಮರಾಜನಗರ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ. ಯವರ ನ್ಯಾಯಾಲಯ, ಚಾಮರಾಜನಗರ .

ಸಿಸಿ. 1084/2019

| | | |
|---|---|---|
| ಸಾಕ್ಷಿದಾರರು ಹೆಸರು | : ಮಹದೇವ | ದಿನಾಂಕಃ 17.06.2026 |
| ತಂದೆಯ ಹೆಸರು | : ಗುರುಸಿದ್ದಶೆಟ್ಟಿ | ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ |
| ವಯಸ್ಸು | : 38 ವರ್ಷ | ಬೋಧಿಸಲಾಯಿತು. |
| ಉದ್ಯೋಗ | : ಕೂಲಿ | **CW-3** |
| ವಾಸಸ್ಥಳ | : ವಡ್ಡರಹಳ್ಳಿ ಗ್ರಾಮ. | **PW-2** |

ಮುಖ್ಯ ವಿಚಾರಣೆ : ಮಾನ್ಯ ಎಪಿಪಿರವರಿಂದಃ

ಮೃತ ಬಸವಣ್ಣ ನನ್ನ ಚಿಕ್ಕಪ್ಪನ ಮಗ. ಮೃತ ಅಬ್ದುಲ್ ರಹೀಮ್ ನನಗೆ ಪರಿಚಯ. ಆರೋಪಿ ನನಗೆ ಪರಿಚಯ. ಸುಮಾರು 7–8 ವರ್ಷಗಳ ಹಿಂದೆ ನಾನು ಕೂಲಿ ಕೆಲಸಕ್ಕೆ ಹೋಗಿದ್ದಾಗ ಮಧ್ಯಾಹ್ನ 3.00 ಗಂಟೆಗೆ ನನ್ನ ಮೊಬೈಲ್ ಗೆ ಯಾರೋ ಒಬ್ಬ ವ್ಯಕ್ತಿ ಫೋನ್ ಮಾಡಿ ನಿಮ್ಮ ತಮ್ಮ ಬಸವಣ್ಣ ರವರ ವಾಹನಕ್ಕೆ ಅಪಘಾತವಾಗಿದೆ ಎಂದು ತಿಳಿಸಿರುತ್ತಾರೆ. ನಂತರ ನಾನು ಹೊಸಹಳ್ಳಿಗೆ ಹೋಗಿ ಚಾಸಾ–1 ರವರಿಗೆ ವಿಚಾರ ತಿಳಿಸಿರುತ್ತೇನೆ. ನಾವೆಲ್ಲರೂ ತಕ್ಷಣ ಅಪಘಾತ ಸ್ಥಳಕ್ಕೆ ಹೋಗಿದ್ದು, ಅಲ್ಲಿ ಬಸವಣ್ಣ, ಆರೋಪಿ ಮತ್ತು ರಹೀಮ್ ರವರು ಗಾಯಗೊಂಡು ಸ್ಥಳದಲ್ಲಿ ಬಿದ್ದಿದ್ದು, ಎರಡೂ ವಾಹನಗಳಿಗೆ ಜಖಂವಾಗಿದ್ದವು. ಅಲ್ಲಿಂದ ಆಂಬುಲೆನ್ಸ್ ನಲ್ಲಿ ಆ ಮೂರು ಜನರನ್ನು ಅರಕಲವಾಡಿ ಆಸ್ಪತ್ರೆಗೆ ದಾಖಲು ಮಾಡಿರುತ್ತೇವೆ. ಆ ದಿನ ಬಸವಣ್ಣ ಯಮಹ ಗಾಡಿಯಲ್ಲಿ ಪ್ರಯಾಣಿಸುತ್ತಿದ್ದು, ಆರೋಪಿ ಮತ್ತು ರಹೀಮ್ ರವರು ಡಿಸ್ಕವರಿ ವಾಹನದಲ್ಲಿ ಪ್ರಯಾಣಿಸುತ್ತಿದ್ದರು. ಸಾಕ್ಷಿ ನಿಪಿ–2 ಮತ್ತು 3 ರಲ್ಲಿನ ಸ್ಥಳ ಮತ್ತು ವಾಹನಗಳನ್ನು ನೋಡಿ ಗುರುತಿಸಿರುತ್ತಾರೆ. ಎರಡು ದಿನದ ನಂತರ ನನ್ನ ತಮ್ಮ ಬಸವಣ್ಣ ಜಿಲ್ಲಾ ಆಸ್ಪತ್ರೆಯಲ್ಲಿ ಮೃತನಾಗಿರುತ್ತಾನೆ. ಈ ಕುರಿತು ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಸದರಿ ಅಪಘಾತ ಯಾರ ತಪ್ಪಿನಿಂದ ಆಯಿತು ಎಂದರೆ ನನಗೆ ಗೊತ್ತಿಲ್ಲ. ಆ ದಿನ ನನಗೆ ಫೋನ್ ಮಾಡಿದ ವ್ಯಕ್ತಿ ಯಾರು ಎಂದರೆ ನನಗೆ ಗೊತ್ತಿಲ್ಲ.

**ಪಾಟೀಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಂ.ಎಸ್ ರವರಿಂದಃ (ಎಲ್.ಎ.ಡಿ.ಎಸ್)**

ಆ ದಿನ ನಾನು ನಮ್ಮ ಊರಿನಲ್ಲಿಯೇ ಕೂಲಿಗೆ ಹೋಗಿದ್ದೆನು. ನಾವು ಅಪಘಾತ ಸ್ಥಳ ತಲುಪಿದಾಗ ಮಧ್ಯಾಹ್ನ 3.00 ಗಂಟೆ ಆಗಿತ್ತು. ನನಗೆ ಮಧ್ಯಾಹ್ನ 2.30ಕ್ಕೆ ಫೋನ್ ಬಂದಿತ್ತು. ನಾನು ಸ್ಥಳತಲುಪಿದ ನಂತರ ಬಸವಣ್ಣರವರನ್ನು ಮಾತನಾಡಿಸಿರುತ್ತೇನೆ. ನಾನು ಆ ದಿನ ಅಪಘಾತ ಸ್ಥಳಕ್ಕೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಮೃತ ಬಸವಣ್ಣ ನನ್ನ ಚಿಕ್ಕಪ್ಪನ ಮಗನಿದ್ದು, ಅವರ ಕುಟುಂಬದವರಿಗೆ

ಸಹಾಯ ಮಾಡುವ ಉದ್ದೇಶದಿಂದ ನಾನು ಅಪಘಾತ ಸ್ಥಳಕ್ಕೆ ಹೋಗಿದ್ದೆನು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿ. ಮೃತ ಬಸವಣ್ಣನಿಗೆ ಮದ್ಯಪಾನ ಮಾಡುವ ಅಭ್ಯಾಸ ಇತ್ತು ಎಂದರೆ ನನಗೆ ಗೊತ್ತಿಲ್ಲ.

ಮರು ವಿಚಾರಣೆ : ಇಲ್ಲಾ.

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇ ಒ.,

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಚಾಮರಾಜನಗರ.